**ಕರ್ನಾಟಕ ವಿಧಾನ ಪರಿಷತ್**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 70 |
| ಸದಸ್ಯರ ಹೆಸರು | : | ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14.09.2021 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಮಹಾನಗರ ಪಾಲಿಕೆ ಕಾನೂನು 1976ರ ಕಲಂ 491 ಮತ್ತು 492ರ ಪ್ರಕಾರ ಮಹಾನಗರ ಪಾಲಿಕೆ ಕಾರ್ಯ ವ್ಯಾಪ್ತಿಗೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪೋಲೀಸ್ ಅಧಿಕಾರ ನೀಡಲು ತಿಳಿಸಲಾಗಿದ್ದು, ಹಾಗೂ ಈ ಅಧಿಕಾರ ನೀಡಲು ವಿಧಾನ ಸಭೆಯ ಅರ್ಜಿ ಸಮಿತಿಯು ಸಹ ದಿನಾಂಕ:17.07.2015 ರಲ್ಲಿ ಶಿಫಾರಸ್ಸು ಮಾಡಿರುವುದು ನಿಜವೇ; ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಹೌದು.<br><br>ಈ ಕುರಿತು ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976ರ ಕಲಂ 492ಕ್ಕೆ ತಿದ್ದುಪಡಿ ತರಲು ಪೌರಾಡಳಿತ ನಿರ್ದೇಶನಾಲಯ ದಿಂದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸರ್ಕಾರದ ಪತ್ರ ದಿನಾಂಕ: 23.07.2021 ಮತ್ತು ದಿನಾಂಕ:09-09-2021 ರ ಪತ್ರಗಳಲ್ಲಿ ಕೋರಲಾಗಿದೆ. ಪ್ರಸ್ತಾವನೆಯು ಸ್ವೀಕೃತಗೊಂಡ ನಂತರ, ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯ/ಸಹಮತಿ ಪಡೆದು ಅದರಂತೆ ಪರಿಶೀಲಿಸಲಾಗುವುದು. |
| (ಆ) | ಈ ವಿಷಯವಾಗಿ 2015ರಲ್ಲಿ ಅಂದಿನ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ನಿಯಮ 351ರ ಮೇರೆಗೆ ಗಮನ ಸೆಳೆದಾಗ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿರುವುದು ನಿಜವೇ; ಹಾಗಿದ್ದಲ್ಲಿ, ಈ ಭರವಸೆ ಜಾರಿಯಾಗದಿರಲು ಕಾರಣಗಳೇನು; (ವಿವರ ನೀಡುವುದು) | |
| (ಇ) | ಸರ್ಕಾರವು ಮೇಲಿನ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಉದ್ದೇಶವನ್ನು ಹೊಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು? (ವಿವರ ಒದಗಿಸುವುದು) | |

ಕಡತ ಸಂಖ್ಯೆ: ನಅಇ 102 ಎಂಎನ್‌ಇ 2021(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು